# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 697

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ,

ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಉತ್ತರಿಸಬೇಕಾದ ದಿನಾಂಕ: : 24-07-2019

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| | ರಾಜ್ಯದಲ್ಲಿ ಫಾಸ್ಟರ್ ಕೇರ್ ಯೋಜನೆಗೆ ಚಾಲನೆ ನೀಡಲಾಗಿದೆಯೇ ? | ಹೌದು.<br>ಕೇಂದ್ರ ಸರ್ಕಾರದ ಫಾಸ್ಟರ್ ಕೇರ್ ಮಾದರಿ ನಿಯಮಾವಳಿಗಳು 2016ರನ್ವಯ ರಾಜ್ಯದಲ್ಲಿ ಈ ಯೋಜನೆಗೆ ಚಾಲನೆ ನೀಡಲಾಗಿದೆ. |
| ಆ | ರಾಜ್ಯದಲ್ಲಿ ನೋಂದಾಯಿತವಾದ ಫಾಸ್ಟರ್ ಕೇರ್ ಸಂಸ್ಥೆಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು ವಿವರ ನೀಡುವುದು) | ಪ್ರಸ್ತುತ ರಾಜ್ಯದಲ್ಲಿ ಫಾಸ್ಟರ್ ಕೇರ್ ಯೋಜನೆಯ ಮಾರ್ಗಸೂಚಿಯನ್ನು ಸಿದ್ದಪಡಿಸಲಾಗುತ್ತಿದ್ದು, ಅನುಮೋದನೆಗೊಂಡ ನಂತರ ಫಾಸ್ಟರ್ ಕೇರ್ ಸಂಸ್ಥೆಗಳನ್ನು ನೋಂದಾಯಿಸಲು ಕ್ರಮ ಕೈಗೊಳ್ಳಲಾಗುವುದು. |
| ಇ | ಈ ಫಾಸ್ಟರ್ ಕೇರ್ ಸಂಸ್ಥೆಗಳಲ್ಲಿರುವ ಮಕ್ಕಳ ಸಂಖ್ಯೆ ಎಷ್ಟು: (ಜಿಲ್ಲಾವಾರು ವಿವರ ನೀಡುವುದು) | ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಫಾಸ್ಟರ್ ಕೇರ್ ಯೋಜನೆಯ ಮಾರ್ಗಸೂಚಿಯು ಸಿದ್ದಗೊಳ್ಳುತ್ತಿರುವುದರಿಂದ ಯಾವುದೇ ಫಾಸ್ಟರ್ ಕೇರ್ ಸಂಸ್ಥೆಗಳನ್ನು ನೋಂದಾಯಿಸಲಾಗಿರುವುದಿಲ್ಲವಾದ್ದರಿಂದ ಮಕ್ಕಳ ಸಂಖ್ಯೆ "ಶೂನ್ಯ" ವಾಗಿರುತ್ತದೆ. |
| ಈ | ಇಂತಹ ಯೋಜನೆಗಳಿಗೆ ಸರ್ಕಾರದಿಂದ ನೀಡಲಾಗುವ ಅನುದಾನ ಎಷ್ಟು: ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹಣವನ್ನು ಇದಕ್ಕಾಗಿ ಮೀಸಲಿಡಲಾಗಿದೆ ಮತ್ತು ಎಷ್ಟು ಖರ್ಚಾಗಿದೆ: ಇದರಿಂದ ಎಷ್ಟು ಮಕ್ಕಳಿಗೆ ಪ್ರಯೋಜನವಾಗಿದೆ: | ಫಾಸ್ಟರ್ ಕೇರ್ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದೆ. ಕರ್ನಾಟಕ ರಾಜ್ಯದಲ್ಲಿ ಮಾರ್ಗಸೂಚಿಗಳನ್ನು ಸಿದ್ದಗೊಳಿಸಲಾಗುತ್ತಿರುವುದು, ಮಾರ್ಗಸೂಚಿಗಳು ಅನುಮೋದನೆಗೊಂಡ ನಂತರ ಈ ಯೋಜನೆಗಾಗಿ ಅನುದಾನವನ್ನು ನೀಡಲಾಗುವುದು. |

ಸಂ:ಮಮಇ 42 ಮಭಾಬ 2019

(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ,
ಹಿರಿಯ ನಾಗರೀಕರ ಸಬಲೀಕರಣ ಇಲಾಖಾ ಸಚಿವರು